ಪ್ರೇಮವೆನ್ನುವುದು ಅಷ್ಟು ದೊಡ್ಡ ಬದ್ಧತೆಯನ್ನು ಬಯಸಿದರೆ ನನ್ನಂತಹವನಿಗೆ ಅದು ಬಹು ದುಬಾರಿ ಎನಿಸಿತು. ನಾನು ಆಯ್ದುಕೊಳ್ಳುವ ಬದುಕು ಇದಲ್ಲವೇ ಅಲ್ಲ ಎನಿಸಿದರೂ ನಿರಾಶೆಯ ಖಿನ್ನತೆ ನನ್ನ ಅಂತರಂಗವನ್ನು ಮುಚ್ಚಿಕೊಳ್ಳತೊಡಗಿತು.

ಮತ್ತಷ್ಟು ದಿನ ಮೌನ ಉಪೇಕ್ಷೆ. ನಾನೂ ಶ್ರೀಮದ್ಗಾಂಭೀರ್ಯದಿಂದ ಇರಲು ತೊಡಗಿಕೊಂಡೆ. ಇದ್ದಕ್ಕಿದ್ದಂತೆ ಮಾಮೂಲಿ ನಗೆಲಹರಿಯಲ್ಲಿ ವ್ಯವಹರಿಸತೊಡಗಿದಳು.

ಥತ್! ಈ ಹೆಣ್ಣಿನ ಗೀಳು ನನ್ನನ್ಯಾಕೆ ಇಷ್ಟು ಅಲ್ಲಾಡಿಸುತ್ತಿದೆ. ಮೈ ತೆವಲಿಗೆ ಬೇಕೆಂದರೆ ಹೆಣ್ಣೊಬ್ಬಳು ದೊರೆಯಲಾರಳೆ ಎನಿಸಿದರೂ... ನಿಜ... ಈಗ ಯೋಚಿಸತೊಡಗಿದೆ. ಇವಳು ನನ್ನ ಹಿಂದೆ ಬಿದ್ದಾಗಿನಿಂದಲೋ ಅಥವಾ ನಾನವಳ ಬೆನ್ನು ಹತ್ತಿದ ಮೇಲೂ ನಾನು ಇನ್ನಾವ ಹೆಣ್ಣನ್ನೂ ನೋಡಲಿಲ್ಲ, ಕೂಡಲಿಲ್ಲ. ನನ್ನ ಹಳೆಯ ಗೆಳತಿಯರಿಂದಲೂ ಸಂಪರ್ಕ ಕಡಿದುಕೊಂಡು ಬಹುಕಾಲವಾಗಿತ್ತು. ಹಾಗೇ ನನಗ್ಯಾರೂ ಪ್ರೇಯಸಿಯರಿರಲಿಲ್ಲ. ಎಲ್ಲರೂ... ಎಲ್ಲವೂ... ಅನುಕೂಲಕ್ಕೆಂದು ಮಾಡಿಕೊಂಡ ಯಾವುದೇ ನಿರ್ಬಂಧಗಳಿಲ್ಲದ ಸಂಬಂಧಗಳು. ತೀರಾ ಹಸಿದಾಗ ಉಣ್ಣುವ ಒಂದು ಬಟ್ಟಲು ಚಿಕನ್ ಬಿರ್ಯಾನಿಯಂತೆ ತೆತ್ತ ಹಣಕ್ಕೆ ತಿಂದನ್ನ ಸಮನಾದ ಮೇಲೆ ಯಾವ ಭಾವ ಬಂಧಗಳೂ ಇಲ್ಲ.

ಇವಳನ್ನು ನೋಡಿದ ಮೇಲೆ ಅವಳು ನನ್ನನ್ನು ಕಾಡತೊಡಗಿದ ಮೇಲೆ ನಾನ್ಯಾಕೆ ಇನ್ಯಾರನ್ನು ನೋಡಿಕೊಳ್ಳಲಿಲ್ಲ. ಇವಳು ಚೆಂದನೆಯ ಹೆಣ್ಣು ಎಂಬುದು ನಿಜವಾದರೂ... ಇನ್ನೂ ಚೆಂದದ ಹೆಣ್ಣುಗಳನ್ನು ನಾನು ಕಂಡಿಲ್ಲವೆಂತಲ್ಲ. ಯಾಕೆ ಪದೇಪದೇ ಆಗುವ ಭಾವ ಸಂಘರ್ಷ ನಂತರದ ನೀರವ, ನಂತರದ ಮಾಮೂಲು ಲಹರಿಯ ಮೇಲೆ ಮತ್ತದೇ ಹಪಹಪಿ, ಇಷ್ಟಕ್ಕೂ ನನ್ನನ್ನು ತಿರಸ್ಕರಿಸಿದ ಮೊದಲ ಹೆಣ್ಣೇನು ಇವಳಲ್ಲ. ನಿವೇದಿತಾ ಚೌಧರಿಯೆಂಬ ಹೆಣ್ಣು ನನ್ನ ಕೇಳುವಿಕೆಗೆ ಕೆರಳಿ ಕೆಂಡವಾಗಿ ನನ್ನನ್ನು ವಾಚಾಮಗೋಚರ ಉಗಿದಟ್ಟಿರಲಿಲ್ಲವೇ? ಆಗ ನನಗೇನೂ ಆಗದ್ದು, ಕಾಡದ್ದು ಈಗ ಇಷ್ಟು ಪರಿ ಕಂಗೆಡಿಸುತ್ತಾ ಕಾಡುತ್ತಿದೆಯೆಂದರೆ...



ಪ್ರೇಮವೆಂದರೆ ಹೀಗೇ ಇರಬಹುದೇನೊ... ಇಷ್ಟಕ್ಕೂ ಪ್ರೇಮವೆಂದರೆ ದೊಡ್ಡ ಬುಲ್ಶಿಟ್; ಬದುಕಿಗೆ ಅದರ ಅಗತ್ಯವೇ ಇಲ್ಲ. ಅದು ಮಾಡುವ ಉಪಕಾರಕ್ಕಿಂತ ಅಪಕಾರವೇ ಜಾಸ್ತಿ ಎಂದುಕೊಂಡವನು ನಾನು. ಯಾವ ಕಮಿಟ್‌ಮೆಂಟ್ ಇಲ್ಲದೆ